UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Friday
15-05-2026

ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾದ ಪ್ರೇಮ್‌ಕುಮಾರ್

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

ದೇವಿತಾ ಸಿ. ಸುಬ್ಬಯ್ಯ



ಕೃಷಿ ಕೇವಲ ಒಂದು ಕೋರ್ಸ್ ಅಲ್ಲ, ಅದು ದೇಶದ ಭವಿಷ್ಯ. ಶ್ರಮ, ಆಸಕ್ತಿ ಮತ್ತು ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಕೃಷಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ.
■ ಪ್ರೇಮ್ ಕುಮಾರ್, ಕೃಷಿ ವಿವಿ ವಿದ್ಯಾರ್ಥಿ

ಬೆಂಗಳೂರು: ಸಾಮಾನ್ಯ ರೈತ ಕುಟುಂಬದ ಹಿನ್ನೆಲೆ ಹೊಂದಿರುವ ಹಾಗೂ ಟೆಂಪೋ ಚಾಲಕನ ಮಗ ಇಂದು ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾನೆ. ಈ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾನೆ. ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಟೆಂಪೋ ಚಾಲಕ ಈಶ್ವರರಾವ್ ಹಾಗೂ ಲಕ್ಷ್ಮಿ ಬಾಯಿ ದಂಪತಿ ಮಗನಾಗಿರುವ ಕೆ.ಈ. ಪ್ರೇಮ್‌ಕುಮಾರ್ ಕೃಷಿ ವಿಜ್ಞಾನ ಪದವಿಯಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ.91.02 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಜತೆಗೆ ಒಟ್ಟು 15 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ ಹಲವಾರು ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾನೆ.

ಗ್ರಾಮೀಣ ಬದುಕಿನಿಂದ ಸಾಧನೆಯೆಡೆಗೆ: ರೈತ ಕುಟುಂಬದ ಹಿನ್ನೆಲೆಯಲ್ಲೇ ಬೆಳೆದ ಪ್ರೇಮ್‌ಕುಮಾರ್, ಬಾಲ್ಯದಿಂದಲೇ ಕೃಷಿ ಜೀವನವನ್ನು ಹತ್ತಿರದಿಂದ ಕಂಡವರು.

ಕೃಷಿಯಿಂದ ಕೃಷಿ ವಿಜ್ಞಾನಕ್ಕೆ

ಜಿಕೆವಿಕೆ ಶಿಕ್ಷಣದ ವೇಳೆ ಅವರು ಕೃಷಿಯ ವೈಜ್ಞಾನಿಕ ಅಂಶಗಳನ್ನು ಆಳವಾಗಿ ಅರ್ಥಮಾಡಿಕೊಂಡರು. ಮಣ್ಣು ವಿಜ್ಞಾನ, ಬೆಳೆ ಉತ್ಪಾದನೆ, ಬೀಜ ತಂತ್ರಜ್ಞಾನ, ಮತ್ತು ಕೃಷಿ ಸಂಶೋಧನೆಗಳಂತಹ ವಿಷಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಇದರೊಂದಿಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಿಂದ ಸಿಗುತ್ತಿದ್ದಂತಹ ಮಾರ್ಗದರ್ಶನದಿಂದ ಅತ್ಯುತ್ತಮ ಅಂಕಗಳೊಂದಿಗೆ 15 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

Hosadiganta pg 04

Vijayavani pg 03

ಗುಣಮಟ್ಟದ ಕೃಷಿ ಉತ್ಪಾದನೆಗೆ ಒತ್ತು ನೀಡಿ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ | ಬೆಂಗಳೂರು ಕೃಷಿ ವಿವಿಯ 60ನೇ ಘಟಿಕೋತ್ಸವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು



ವಿಜಯವಾಣಿ ಚಿತ್ರಗಳು

ಆಧುನಿಕ ತಂತ್ರಜ್ಞಾನ ಆಧಾರಿತ ಹಾಗೂ ರೈತಕೇಂದ್ರಿತ ಕೃಷಿ ಪದ್ಧತಿಯನ್ನು ಅಳವಡಿಸುವ ಮೂಲಕ ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಮೂಲಕ 2047ರಲ್ಲಿ ವಿಕಸಿತ ಭಾರತದ ಸಂಕಲ್ಪ ಸಾಕಾರ ಮಾಡಲು ಸಾಧ್ಯ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದ್ದಾರೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿರುವ ಡಾ. ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಮಾತನಾಡಿದರು.

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸುತ್ತಿದ್ದು, ದಶಕಗಳಿಂದ ಕೃಷಿ ವಿಶ್ವವಿದ್ಯಾಲಯಗಳು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಪದವೀಧರರು ಕೂಡ ತಮ್ಮ ಜ್ಞಾನವನ್ನು ಕೃಷಿಕರ ಒಳಿತಿಗಾಗಿ ಬಳಸಬೇಕು. ಬೇಳೆಕಾಳುಗಳು ಸೇರಿ ಇತರ ಕೃಷಿ ಉತ್ಪನ್ನಗಳನ್ನು ಆಗತ್ಯಕ್ಕಿಂತಕ್ಕಷ್ಟು ಬೆಳೆಯುವುದರಲ್ಲಿ ನಾವು ಸಮರ್ಥರಿದ್ದೇವೆ. ಆದರೆ, ಉತ್ಪಾದನೆಯ ಸಂಖ್ಯೆಯ ಬದಲಾಗಿ ಗುಣಮಟ್ಟದಲ್ಲಿ ವೃದ್ಧಿ ಕಾಣಬೇಕಿದೆ ಎಂದು ಸಲಹೆ ನೀಡಿದರು.

ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಳ: ಕೃಷಿ ಕ್ಷೇತ್ರದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವುದು ಸಂತಸದ ಸಂಗತಿಯಾಗಿದೆ. ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಭಾರತವು ಹಣ್ಣುಗಳು, ತರಕಾರಿಗಳು, ಧಾನ್ಯಗಳು ಸೇರಿ ಅನೇಕ ಕೃಷಿ ಉತ್ಪನ್ನಗಳ ಪ್ರಮುಖ ಉತ್ಪಾದಕ ರಾಷ್ಟ್ರವಾಗಿ ಗುರುತಿಸಿಕೊಂಡಿದೆ. ಆದರಲ್ಲೂ ಈ ಕೃಷಿ ವಿವಿಯು ಆಸ್ಟ್ರೇಲಿಯಾ, ಅಮೆರಿಕ, ಜರ್ಮನಿ ಮತ್ತು ಜಪಾನ್ ಮೊದಲಾದ ದೇಶಗಳಲ್ಲಿ 35 ಹಳ್ಳಿಸ್ವಾಮ್ಯಗಳನ್ನು ಸಂಪಾದಿಸಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ವಿಶ್ವವಿದ್ಯಾಲಯವು 530ಕ್ಕೂ ಹೆಚ್ಚು ಸುಸ್ಥಿರ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ, ದಕ್ಷಿಣ ಭಾರತದಲ್ಲಿ ಮಳೆಯಾಶ್ರಿತ ಕೃಷಿ ತಂತ್ರಜ್ಞಾನಗಳನ್ನು ವರ್ಗಾವಣೆ ಮಾಡಿ, ಕೃಷಿ ಸಮುದಾಯಗಳ ಜೀವನೋಪಾಯವನ್ನು ಸಬಲೀಕರಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಖುಷ್ಕಿ ಬೇಸಾಯಕ್ಕಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳು ವಿರಳ ಮಳೆಯ ವರ್ಷಗಳಲ್ಲಿಯೂ ಉತ್ಪಾದಕತೆಯನ್ನು ಸ್ಥಿರಗೊಳಿಸಲು ನೆರವಾಗಿವೆ. ವಿಶ್ವವಿದ್ಯಾಲಯವು ಭತ್ತ, ರಾಗಿ ಮತ್ತು ಮೆಕ್ಕೆಜೋಳದಂತಹ ಪ್ರಮುಖ ಬೆಳೆಗಳಿಗೆ ಹಲವು ಮಿತವೆಚ್ಚದ ಮತ್ತು ಪರಿಸರ ಸ್ನೇಹಿಕೀಟ ಮತ್ತು ರೋಗ ನಿರ್ವಹಣಾ ತಂತ್ರಜ್ಞಾನಗಳನ್ನೂ ಪರಿಚಯಿಸಿದೆ ಎಂದು ತಿಳಿಸಿದರು.

ಅತ್ಯಧಿಕ ಚಿನ್ನದ ಪದಕಗಳ ಬಾಚಿದ ಪ್ರೇಮ್‌ಕುಮಾರ್

ಈ ಸಾಲಿನಲ್ಲಿ ಅತಿಹೆಚ್ಚು ಚಿನ್ನದ ಪದಕಗಳನ್ನು ಗಳಿಸಿರುವ ಕೆ.ಇ. ಪ್ರೇಮ್‌ಕುಮಾರ್ (ಬಿಎಸ್ಸಿ ಆನರ್ಸ್) 9.102 ಒಟ್ಟಾರೆ ಸರಾಸರಿ ಅಂಕ ಗಳಿಸಿ ವಿವಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಒಟ್ಟು 15 ಚಿನ್ನದ ಪದಕಗಳನ್ನು ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಟೆಂಪೋ ಚಾಲಕನ ಪುತ್ರನಾಗಿರುವ ಈತ ಸದ್ಯ ದೆಹಲಿಯಲ್ಲಿರುವ ಐಸಿಎಆರ್‌ನಲ್ಲಿ ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ ವಿಷಯದಲ್ಲಿ ಎಂಎಸ್ಸಿ ಕೋರ್ಸ್ ವ್ಯಾಸಂಗ ಮಾಡುತ್ತಿದ್ದಾರೆ. 'ಸಂಶೋಧನೆಯ ಮೂಲಕ ರೈತ ಸಮುದಾಯಕ್ಕೆ ಅನುಕೂಲ ಮಾಡುವುದೇ ನನ್ನ ಗುರಿ. ಕಾಲೇಜಿನಲ್ಲಿ ಪ್ರಾಧ್ಯಾಪಕರ ಬೆಂಬಲ, ಮನೆಯವರ ಪ್ರೋತ್ಸಾಹವೂ ನನ್ನ ಸಾಧನೆಗೆ ಬೆನ್ನೆಲುಬಾಗಿದೆ' ಎಂದು ಪ್ರೇಮ್‌ಕುಮಾರ್ ಪ್ರತಿಕ್ರಿಯಿಸಿದರು.

1,115 ವಿದ್ಯಾರ್ಥಿಗಳಿಗೆ ಪದವಿ

ಘಟಿಕೋತ್ಸವದಲ್ಲಿ 2024-25ರ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆಯಾದ 1,115 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 747 ವಿದ್ಯಾರ್ಥಿಗಳು ಸ್ನಾತಕ ಪದವಿಗಳನ್ನು, 260 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಹಾಗೂ 108 ವಿದ್ಯಾರ್ಥಿಗಳು ಡಾಕ್ಟೊರಲ್ ಪದವಿಗಳನ್ನು ಪಡೆದರು.



ಘಟಿಕೋತ್ಸವದಲ್ಲಿ ಅತ್ಯಧಿಕ ಚಿನ್ನದ ಪದಕಗಳಿಸಿದ ಕೆ.ಇ. ಪ್ರೇಮ್‌ಕುಮಾರ್, ಪಿ.ಆರ್. ಫಾತಿಮ ತಸ್ಲೀಮ, ಕೃಷ್ಣಪ್ರಿಯ, ಜ್ಯೋತಿ, ಟಿ.ಕೆ. ಸ್ಫೂರ್ತಿ.

ಗೌರವ ಡಾಕ್ಟರೇಟ್ ಪದವಿ ಪ್ರದಾನ

ಕೃಷಿ ಕ್ಷೇತ್ರದಲ್ಲಿ ಸೇವೆಗೈದ ಜಿ.ವಿ.ಕೆ. ನಾಯ್ಡು, ಎಚ್.ಕೆ. ಶ್ರೀಕಂಠ ಹಾಗೂ ಟಿ.ಎಂ.ಆರವಿಂದ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ಕೆ. ಮಧುಸೂದನ್, ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಎಲ್.ಎಸ್. ಶಶಿಧರ, ವಿವಿಯ ವ್ಯವಸ್ಥಾಪನಾ ಮಂಡಳಿ ಸದಸ್ಯರಿದ್ದರು.

ಮಹಿಳಾ ಉದ್ಯಮಿ ಆಗಬೇಕೆಂಬ ಕನಸು ಈ ಸಾಲಿನಲ್ಲಿ ಅತಿಹೆಚ್ಚು

ಒಟ್ಟು 11 ಚಿನ್ನದ ಪದಕಗಳನ್ನು ಗಳಿಸಿರುವ ಪಿ.ಆರ್. ಫಾತಿಮ ತಸ್ಲೀಮ (ಬಿಎಸ್ಸಿ ಆನರ್ಸ್) 9.069 ಒಟ್ಟಾರೆ ಸರಾಸರಿ ಅಂಕ ಗಳಿಸಿದ್ದಾರೆ. ರೈತ ಕುಟುಂಬದಲ್ಲಿ ಬೆಳೆದ ಇವರಿಗೆ ಕೃಷಿ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆಯಲು ಹೆತ್ತವರೇ ಪ್ರೇರಣೆಯಾಗಿದ್ದಾರೆ. ಸದ್ಯ ಎಂಬಿಎ ಲಾಜಿಸ್ಟಿಕ್ ಆ್ಯಂಡ್ ಆಪ್ರೈಡ್ ಸೈನ್ಸ್ ಮಾಡುತ್ತಿರುವ ಇವರು ವಿವಿಧ ಕೃಷಿ ಸಂಬಂಧಿತ ಕಂಪನಿಗಳಲ್ಲಿ ಕೆಲಸ ಮಾಡಿ, ಉದ್ಯಮಿ ಆಗಬೇಕೆಂಬ ಕನಸನ್ನು ಹೊತ್ತುಕೊಂಡಿದ್ದಾರೆ.

> ಕೃಷಿ ಸಂಶೋಧನೆಯಲ್ಲಿ ಫಿನೋಮಿಕ್ಸ್, ಜೀನ್ ಎಡಿಟಿಂಗ್, ಕ್ವಾಂಟಮ್ ತಂತ್ರಜ್ಞಾನಗಳು, ಕೃತಕ ಬುದ್ಧಿಮತ್ತೆ ಮತ್ತು ಇತರ ಉದಯೋನ್ಮುಖ ಸಾಧನಗಳ ವಿವೇಚನಾಯುಕ್ತ ಏಕೀಕರಣವು ಅಗತ್ಯವಾಗಿದೆ. ಅದೇ ಸಮಯದಲ್ಲಿ, ನಾವು ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಮರುಶೋಧಿಸಬೇಕು. ಅವುಗಳ ಸುಸ್ಥಿರ ಅಭಿವೃದ್ಧಿಗಾಗಿ ಶ್ರಮಿಸಬೇಕು.
> ಡಾ. ಎಲ್.ಎಸ್. ಶಶಿಧರ
> ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ನಿರ್ದೇಶಕ

S-karnataka pg 04

ರೈತರ ಸಮಸ್ಯೆಗಳ ಎದುರಿಸಲು ಪದವೀಧರರ ನೆರವು ಮುಖ್ಯ

ಕೃಷಿ ವಿವಿಯ ಘಟಿಕೋತ್ಸವದಲ್ಲಿ ಗೆಹ್ಲೋಟ್



ಸಂ.ಕ.ಸಮಾಚಾರ, ಬೆಂಗಳೂರು

ಪ್ರಸ್ತುತ ಹವಾಮಾನ ಬದಲಾವಣೆ, ನೀರಿನ ಅಭಾವ, ಮಣ್ಣಿನ ಸವಕಳಿ ಕೀಟನಾಶಕಗಳ ಅತಿಯಾದ ಬಳಕೆ ಮತ್ತು ರೈತರ ಆರ್ಥಿಕ ಸಂಕಷ್ಟಗಳು ಕೃಷಿ ವಲಯದ ಪ್ರಮುಖ ಸವಾಲುಗಳನ್ನು ಎದುರಿಸಲು ಕೃಷಿ ಪದವೀಧರರು ಹಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಕೃಷಿಯನ್ನು ಕೇವಲ ಉದ್ಯೋಗವಲ್ಲ, ಮಾನವ ಸೇವೆಯಾಗಿ ಕಾಣಬೇಕು. ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅಭಿನಂದನೆಗಳು. ದೇಶ ಮತ್ತು ರೈತ ಸಮುದಾಯ ನಿಮ್ಮಿಂದ ಅಪಾರ ನಿರೀಕ್ಷೆ ಇಟ್ಟುಕೊಂಡಿದೆ. ನಿಮ್ಮ ಜ್ಞಾನ, ನವೀನತೆ ಮತ್ತು ಸಮರ್ಪಣೆ ಕೃಷಿ ಕ್ಷೇತ್ರದ ಭವಿಷ್ಯವನ್ನು ರೂಪಿಸಲಿದೆ ಎಂದು ತಿಳಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ನೀರಿನ ಕೊರತೆ ಮತ್ತು ಮಣ್ಣಿನ ಸವೆತದಂತಹ ಸವಾಲುಗಳನ್ನು ವಿಜ್ಞಾನ ಮತ್ತು ನವೀನ ತಂತ್ರಜ್ಞಾನಗಳ ಮೂಲಕ ರೈತರು ಎದುರಿಸಬೇಕು. ಪದವಿ ಪಡೆದ ವಿದ್ಯಾರ್ಥಿಗಳು ಕೇವಲ ಉದ್ಯೋಗ ಹುಡುಕುವವರಾಗದೇ ಉದ್ಯೋಗ ಸೃಷ್ಟಿಸುವ ಕೃಷಿ ಉದ್ಯಮಿಗಳಾಗಬೇಕೆಂದರು. ಈ ವೇಳೆ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್, ಡಾ. ಎಂ. ಜಗದೀಶ್ ಕುಮಾರ್ ಉಪಸ್ಥಿತರಿದ್ದರು.

ಡಾಕ್ಟರೇಟ್ ಪ್ರದಾನ: 1115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ಪದವಿ. ಒಟ್ಟು 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ. ಕೃಷಿಯಲ್ಲಿ ಸೇವೆಗೈದ ಜಿ.ವಿ.ಕೆ ನಾಯ್ಡು, ಶ್ರೀಕಂಠ ಎಚ್.ಕೆ., ಅರವಿಂದ ಟಿ.ಎಂ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ.

15 ಚಿನ್ನದ ಪದಕ ಪಡೆದ ಯುವಕ ಪ್ರೇಮ್



V-karnataka pg 06

ಕೃಷಿ ವಿವಿಯ 60 ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ

ವಿಜ್ಞಾನ, ನೆಲದ ಜ್ಞಾನ ಒಂದಾಗಿಸಿದಾಗಲೇ ಬೆಳವಣಿಗೆ

■ ವಿಕ ಸುದ್ದಿಲೋಕ ಬೆಂಗಳೂರು



ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳ ಸಂಭ್ರಮ

ಕೃತಕ ಬುದ್ಧಿಮತ್ತೆ ಸೇರಿದಂತೆ ತಂತ್ರಜ್ಞಾನ ಆಧಾರಿತ, ಸುಸ್ಥಿರ ಮತ್ತು ರೈತ ಕೇಂದ್ರಿತ ಕೃಷಿ ವ್ಯವಸ್ಥೆಗಳನ್ನು ಉತ್ತೇಜಿಸುವ ಅಗತ್ಯವಿದೆ. ವಿಜ್ಞಾನವನ್ನು ನೆಲದ ವಾಸ್ತವದ ಜತೆ ಹೇಗೆ ಒಂದಾಗಿಸುತ್ತೀರಿ ಎಂಬುದರ ಮೇಲೆ ಕೃಷಿ, ಕೃಷಿಕರ ಬೆಳವಣಿಗೆ ನಿಂತಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ 60ನೇ ಘಟಿಕೋತ್ಸವ ಉದ್ಘಾಟಿಸಿದ ನಂತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

''ಪ್ರಧಾನಿ ನರೇಂದ್ರ ಮೋದಿಯವರ 2027ರ ವಿಕಸಿತ ಭಾರತದ ಕನಸು ಸಾಕಾರವಾಗುವಲ್ಲಿ ಕೃಷಿ ವಲಯದ ಪಾತ್ರ ನಿರ್ಣಾಯಕ. ಹೀಗಾಗಿ, ನಾವು ತಂತ್ರಜ್ಞಾನ ಆಧಾರಿತ, ಸುಸ್ಥಿರ ಮತ್ತು ರೈತ ಕೇಂದ್ರಿತ ಕೃಷಿ ವ್ಯವಸ್ಥೆಗಳನ್ನು ಉತ್ತೇಜಿಸಬೇಕು. ಡ್ರೋನ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ನಿಖರ ಕೃಷಿ, ಡಿಜಿಟಲ್ ಮಾರ್ಕೆಟಿಂಗ್ ಮತ್ತು ಸಾವಯವ ಕೃಷಿಯಂತಹ ಕ್ಷೇತ್ರಗಳು ಕೃಷಿಯ ಭವಿಷ್ಯವನ್ನು ರೂಪಿಸಲಿದ್ದು ಇವುಗಳಿಗೆ ಹೆಚ್ಚು ಒತ್ತು ಕೊಡಬೇಕು,'' ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ''ಕೃಷಿ ವಿವಿಗಳ ವಿಜ್ಞಾನಿಗಳು ಸಂಶೋಧನೆಗೆ ಒತ್ತು ನೀಡಿ ಹೆಚ್ಚಿನ ಸಂಖ್ಯೆಯ ನೂತನ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಿ ರೈತರ ಸಬಲೀಕರಣಕ್ಕೆ ಸಹಕಾರಿಸಬೇಕು. ಕುಲಪತಿಗಳು ವಿವಿ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಸ್ಥಳೀಯ ಹಾಗೂ ವಿಶೇಷ ಬೆಳೆಯ ತಳಿಗಳನ್ನು ಗುರುತಿಸಿ ಆಯಾ ಭೌಗೋಳಿಕ ಪ್ರದೇಶಕ್ಕೆ ಜಿಐ ಟ್ಯಾಗ್ ಪಡೆಯಲು ವಿಜ್ಞಾನಿಗಳ ತಂಡ ರಚಿಸಿ ಕಾರ್ಯೋನ್ಮುಖರಾಗಬೇಕು. ಈ ಮೂಲಕ ರೈತರ ಆದಾಯ ಹೆಚ್ಚಿಸಿ ತಳಿ ಸಂರಕ್ಷಣಾ ಕ್ರಮ ಜರುಗಿಸಬೇಕು,'' ಎಂದು ಸಲಹೆ ನೀಡಿದರು.

ಘಟಿಕೋತ್ಸವ ಭಾಷಣ ಮಾಡಿದ ಬೆಂಗಳೂರಿನ ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಎಲ್.ಎಸ್. ಶಶಿಧರ, ''ಕೃಷಿ ಕ್ಷೇತ್ರದಲ್ಲಿ ವಿನಾಶಕಾರಿ ನಾವೀನ್ಯತೆಗಳಿಗೆ ಹೊರತಾದ ಚಿಂತನೆಗಳನ್ನು ಸಬೇಕಿದೆ,'' ಎಂದು ಹೇಳಿದರು.

ವಿವಿ ಕುಲಪತಿ ಡಾ.ಎಸ್.ವಿ. ಸುರೇಶ ವಾರ್ಷಿಕ ವರದಿ ಮಂಡಿಸಿದರು. ಕುಲಸಚಿವ ಡಾ.ಕೆ. ಮಧುಸೂಧನ್, ವಿವಿ ಸ್ಥಾಪನಾ ಮಂಡಳಿ ಸದಸ್ಯರು, ಕೃಷ್ಣನಿಕ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

55 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, ಮೂವರಿಗೆ ಗೌರವ ಡಾಕ್ಟರೇಟ್

ಘಟಿಕೋತ್ಸವದಲ್ಲಿ 2024-25ರಲ್ಲಿ ತೇರ್ಗಡೆಯಾದ ಒಟ್ಟು 1115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 747 ಮಂದಿ ಸ್ನಾತಕ, 260 ಸ್ನಾತಕೋತ್ತರ, 108 ಮಂದಿ ಪಿಎಚ್‌ಡಿ ಪದವಿ ಪಡೆದರು. ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 59 ಸ್ನಾತಕ, ಸ್ನಾತಕೋತ್ತರ 68, ಪಿಎಚ್‌ಡಿ 13 ಸೇರಿ ಒಟ್ಟಾರೆ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. ಈ ವೇಳೆ ಕೃಷಿ ಕ್ಷೇತ್ರದಲ್ಲಿ ಅಪರೂಪದ ಸಾಧನೆ ಮಾಡಿದ ಜಿ.ವಿ.ಕೆ. ನಾಯ್ಡು ಶ್ರೀಕಂಠ, ಅರವಿಂದ ಟಿ.ಎಂ. ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲರು ಪ್ರದಾನ ಮಾಡಿದರು.

> ಪ್ರಸ್ತುತ ದಿಲ್ಲಿಯ ಇಂಡಿಯನ್ ಆಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಿಡ್ಡ್ ಸೈನ್ಸ್ ಮತ್ತು ಟೆಕ್ನಾಲಜಿ ವಿಭಾಗದಲ್ಲಿ ಎಂಎಸ್ಸಿ ಓದುತ್ತಿದ್ದೇನೆ. ಭವಿಷ್ಯದಲ್ಲಿ ರೈತ ಸಮುದಾಯಕ್ಕೆ ಸಹಾಯವಾಗುವ ಸಂಶೋಧನೆಗಳನ್ನು ನಡೆಸುವ ಗುರಿಯಿದೆ.
> - ಪ್ರೇಮ್

ಕೃಷಿ ವಿವಿಯ 60ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್

ಕೃಷಿಯೇ ರಾಷ್ಟ್ರದ ಆರ್ಥಿಕತೆಯ ಬೆನ್ನೆಲುಬು

ನ ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೃಷಿ ಭಾರತ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ರೈತರ ಸಮೃದ್ಧಿಯೇ ರಾಷ್ಟ್ರದ ಅಭಿವೃದ್ಧಿಗೆ ದಾರಿ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತಿಳಿಸಿದರು.

ಜಕೆವಿಕೆಯಲ್ಲಿ ಗುರುವಾರ ಆಯೋಜಿಸಿದ್ದ ಕೃಷಿ ವಿವಿಯ 60ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೃಷಿಯನ್ನು ಕೇವಲ ಉದ್ಯೋಗವಲ್ಲ, ಮಾನವ ಸೇವೆಯಾಗಿ ಕಾಣಬೇಕು. ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅಭಿನಂದನೆಗಳು. ದೇಶ ಮತ್ತು ರೈತ ಸಮುದಾಯ ನಿಮ್ಮಿಂದ ಅಪಾರ ನಿರೀಕ್ಷೆ ಇಟ್ಟುಕೊಂಡಿದೆ. ನಿಮ್ಮ ಜ್ಞಾನ, ನವೀನತೆ ಮತ್ತು ಸಮರ್ಪಣೆ ಕೃಷಿ ಕ್ಷೇತ್ರದ ಭವಿಷ್ಯ ರೂಪಿಸಲಿದೆ ಎಂದರು.

ಆಹಾರ ಮತ್ತು ಪೌಷ್ಟಿಕ ಭದ್ರತೆ, ಹವಾಮಾನ ಬದಲಾವಣೆ, ಮಣ್ಣಿನ ಆರೋಗ್ಯ ಕುಸಿತ ಹಾಗೂ ನೀರಿನ ಅಭಾವಗಳು ಭಾರತೀಯ ಕೃಷಿ ಎದುರಿಸುತ್ತಿರುವ ಸವಾಲುಗಳಾಗಿವೆ ಇದರಿಂದಾಗಿ ಅನಿಯಮಿತ ಮಳೆ, ಹೆಚ್ಚುತ್ತಿರುವ ತಾಪಮಾನ ಮತ್ತು ಭೂಗರ್ಭಜಲ ಮಟ್ಟ ಕುಸಿತ ಉಂಟಾಗಿ ಕೃಷಿ ಉತ್ಪಾದನೆಗೆ ಗಂಭೀರ ಹೊಡೆತ ಬೀಳುತ್ತಿದೆ. ಭವಿಷ್ಯದ ಕೃಷಿ ಸಂಪನ್ಮೂಲ-ಸಮರ್ಥ ಮತ್ತು ಹವಾಮಾನ ಸಹಿಷ್ಣು ಪದ್ಧತಿಗಳತ್ತ ಸಾಗಬೇಕು.

ನೈಸರ್ಗಿಕ ಕೃಷಿಯು ಮಣ್ಣಿನ ಆರೋಗ್ಯ ಕಾಪಾಡುವುದರ ಜತೆಗೆ ರೈತರ ವೆಚ್ಚ ಕಡಿಮೆ ಮಾಡಿ ಸುರಕ್ಷಿತ ಆಹಾರ ಉತ್ಪಾದನೆಗೆ ಸಹಕಾರಿ ನೀಡಬೇಕು. ಪ್ರಧಾನಿ ಮೋದಿ ಅವರ ವಿಕಸಿತ ಭಾರತ 2047 ಸಂಕಲ್ಪ ಸಾಕಾರಗೊಳಿಸಲು ತಂತ್ರಜ್ಞಾನ ಆಧಾರಿತ ಕೃಷಿಗೆ ಹೆಚ್ಚಿನ ಮಹತ್ವ ನೀಡಬೇಕಿದೆ. ಡ್ರೋನ್ ತಂತ್ರಜ್ಞಾನ, ಎಐ, ನಿಖರ ಕೃಷಿ, ಡಿಜಿಟಲ್ ಮಾರ್ಕೆಟಿಂಗ್ ಹಾಗೂ ಸಾವಯವ ಕೃಷಿ ಕ್ಷೇತ್ರಗಳು ಭವಿಷ್ಯದ ಕೃಷಿಗೆ ಹೊಸ ದಿಕ್ಕು ನೀಡಲಿವೆ. ಸಣ್ಣ ಮತ್ತು ಅಂಚಿನ ರೈತರಿಗೆ ತಂತ್ರಜ್ಞಾನ ಕೈಗೆಟುಕುವ ದರದಲ್ಲಿ ತಲುಪಿಸಬೇಕಿದ್ದು, ಬೆಳೆ ಕೊಯ್ಲಿನ ನಂತರದ ನಷ್ಟ ತಡೆಯಲು ಸಂಸ್ಕರಣೆ ಹಾಗೂ ನೇರ ಮಾರುಕಟ್ಟೆ ವ್ಯವಸ್ಥೆಗಳನ್ನು ಬಲಪಡಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಎಲ್.ಎಸ್. ಶಶಿಧರ್ ಮಾತನಾಡಿ, ಇಂದಿನ ಅನಿಶ್ಚಿತ ಜಗತ್ತಿನಲ್ಲಿ ವಿದ್ಯಾರ್ಥಿಗಳು ಸವಾಲುಗಳನ್ನು ಎದುರಿಸಲು ಸಿದ್ಧರಾಗಬೇಕು. ವಿಜ್ಞಾನ ಮತ್ತು ಸಂಶೋಧನೆಯೇ ಭವಿಷ್ಯದ ಕೃಷಿಗೆ ದಿಕ್ಕು ತೋರಿಸಲಿದೆ. ಜಿನೋಮಿಕ್ಸ್, ಜೀನ್ ಎಡಿಟಿಂಗ್, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನಗಳಂತಹ ಅಧುನಿಕ ತಂತ್ರಜ್ಞಾನಗಳನ್ನು ಕೃಷಿ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳುವುದರ ಜತೆಗೆ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಮರುಪರಿಶೀಲಿಸಿ, ಅವುಗಳನ್ನು ಆರ್ಥಿಕವಾಗಿ ಹೆಚ್ಚು ಲಾಭದಾಯಕ ಹಾಗೂ ಹವಾಮಾನ ಬದಲಾವಣೆಗೆ ತಕ್ಕಂತೆ ರೂಪಿಸುವ ಅಗತ್ಯವಿದೆ. ಬಾಸುಮತ್ತಿ ಅಕ್ಕಿಯ ರಫ್ತು ಮರುಪ್ರಾರಂಭವಾಗಿ ದೇಶದ ಆರ್ಥಿಕತೆಗೆ ಮಹತ್ತರ ಕೊಡುಗೆ ನೀಡುತ್ತಿದೆ. ಹವಾಮಾನ ಬದಲಾವಣೆಗೆ ತಕ್ಕ ಕೃಷಿ ಸಂಶೋಧನೆ, ಮಣ್ಣಿನ ಆರೋಗ್ಯ ಹಾಗೂ ಪರಿಸರ ಅಧ್ಯಯನಕ್ಕಾಗಿ ವಿವಿಧ ಸಂಸ್ಥೆಗಳ ಸಹಭಾಗಿತ್ವ ಅಗತ್ಯ ಎಂದರು.



ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಜೆ.ವಿ.ಕೆ ನಾಯ್ಡು ಶ್ರೀಕಂಠ ಎಚ್.ಕೆ ಹಾಗೂ ಅರವಿಂದ್ ಟಿ.ಎಂ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಈ ವೇಳೆ ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ.ಎಲ್.ಎಸ್.ಶಶಿಧರ್, ವಿ.ವಿ ಕುಲಪತಿ ಡಾ. ಎಸ್.ವಿ.ಸುರೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

55 ಮಂದಿಗೆ 140 ಚಿನ್ನದ ಪದಕ, ಮೂವರಿಗೆ ಗೌಡಾ

ಕೃಷಿ ವಿ.ವಿ ಯ 60 ನೇ ಘಟಿಕೋತ್ಸವದಲ್ಲಿ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. ಬಿಎಸ್ಸಿ (ಆನರ್ಸ್) ಕೃಷಿ ವಿಭಾಗದಲ್ಲಿ ಕೆ.ಈ.ಶ್ರೇಮ್ ಕುಮಾರ್ 15 ಚಿನ್ನದ ಪದಕಗಳನ್ನು ಪಡೆದು ವಿ.ವಿ ಗೆ ಪ್ರಥಮ ರ್ಯಾಂಕ್ ಪಡೆದುಕೊಂಡಿದ್ದಾನೆ. ಬಿಎಸ್ಸಿ ಆನರ್ಸ್‌ನ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಪಿ.ಆರ್.ಹಾತಿಮ ತಸ್ಲೀಮ್ 11 ಚಿನ್ನದ ಪದಕದೊಂದಿಗೆ ದ್ವಿತೀಯ ಸ್ಥಾನ, ಜ್ಯೋತಿ ಜಿ, ಸ್ಫೂರ್ತಿ ಟಿ.ಕೆ 8 ಚಿನ್ನದ ಪದಕದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಜೆ.ವಿ.ಕೆ ನಾಯ್ಡು, ಶ್ರೀಕಂಠ ಎಚ್.ಕೆ ಹಾಗೂ ಅರವಿಂದ್ ಟಿ.ಎಂ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದರು. ಒಟ್ಟು 1115 ವಿದ್ಯಾರ್ಥಿಗಳಿಗೆ ಈ ವೇಳೆ ಪದವಿ ಪ್ರದಾನ ಮಾಡಲಾಯಿತು.

ಚಾಲಕನ ಮಗನಿಗೆ 15 ಚಿನ್ನದ ಪದಕ



ಕೋಲಾರ ಜಿಲ್ಲೆಯ ಮಾಲೂರು ತಾಲೂಕು ಕುಡಿಯನೂರು ಗ್ರಾಮದ ಟಿಂಪೊ ಚಾಲಕನ ಮಗ ಕೆ.ಈ.ಶ್ರೇಮ್ ಕುಮಾರ್ ಕೃಷಿ ಸ್ನಾತಕ ಪದವಿಯಲ್ಲಿ ಕೃಷಿ ವಿವಿಗೆ ಪ್ರಥಮ ಸ್ಥಾನ ಪಡೆದಿದ್ದು, 15 ಚಿನ್ನದ ಪದಕಗಳನ್ನುತಮ್ಮದಾಗಿಸಿಕೊಂಡಿದ್ದಾರೆ. ಈ ಕುರಿತು ಮಾತನಾಡಿದ ಅವರು, ತಂದೆ, ತಾಯಿ ಮತ್ತು ಎಲ್ಲರ ಸಹಕಾರದಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು. ಪ್ರಸ್ತುತ ಹೊಸದೆಹಲಿಯಲ್ಲಿ ಸೀಡ್ಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿಯಲ್ಲಿ ಎಂಎಸ್ಸಿ ಪದವಿ ಮಾಡುತ್ತಿದ್ದು, ಮುಂದೆ ರೈತ ಸಮುದಾಯಗಳಿಗೆ ನೆರವಾಗುವುದು ನನ್ನ ಕನಸಾಗಿದೆ. ಪ್ರತಿದಿನದ ನಿರಂತರ ಪ್ರಯತ್ನವೇ ಈ ಗೆಲವು ಎಂದರು.



ನೀರಿನ ಕೊರತೆ ಮತ್ತು ಮಣ್ಣಿನ ಸವೆತದಂತಹ ಸವಾಲುಗಳನ್ನು ವಿಜ್ಞಾನ ಮತ್ತು ನವೀನ ತಂತ್ರಜ್ಞಾನಗಳ ಮೂಲಕ ರೈತರು ಎದುರಿಸಬೇಕು. ಪದವಿ ಪಡೆದ ವಿದ್ಯಾರ್ಥಿಗಳು ಕೇವಲ ಉದ್ಯೋಗ ಹುಡುಕುವವರಾಗದೇ ಉದ್ಯೋಗ ಸೃಷ್ಟಿಸುವ ಕೃಷಿ ಉದ್ಯಮಿಗಳಾಗಬೇಕು. ಕೃಷಿ ವಿ.ವಿ ಹವಾಮಾನ ಬದಲಾವಣೆಧಾರಿತ ಬೆಳೆ ತಳಿಗಳು, ಪರಿಸರ ಸ್ನೇಹಿ ಕೀಟ ಹಾಗೂ ರೋಗ ನಿರ್ವಹಣಾ ತಂತ್ರಜ್ಞಾನಗಳು, ಮಳೆಯಾಶ್ರಿತ ಕೃಷಿ ಪದ್ಧತಿಗಳು ಮತ್ತು ಡಿಜಿಟಲ್ ಕೃಷಿ ಸೇವೆಗಳ ಮೂಲಕ ಲಕ್ಷಾಂತರ ರೈತರಿಗೆ ನೆರವಾಗಿದೆ.

-ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

Viswavani pg 08

1,115 get degrees at 60th UAS-B convocation

The Hindu Bureau
BENGALURU

The 60th convocation of the University of Agricultural Sciences, Bangalore, was held on Thursday. A total of 1,115 students who graduated in the academic year 2024-25 were awarded degrees in undergraduate and postgraduate programmes.

Thaawarchand Gehlot, Governor and Chancellor of the University of Agricultural Sciences, presided over the function.

Noting that agriculture is the backbone of the Indian economy, Mr. Gehlot raised the issue of excessive use of chemical fertilizer and pesticides that pollute the environment and adversely affect human health.

"It is important to promote natural farming. By using natural elements, soil fertility and productivity can be increased. Quality of land can be improved by using organic fertilizer," he said.

N. Cheluvarayaswamy, Agriculture Minister, was also present at the event.



Class act: The toppers of the 60th convocation of the University of Agricultural Sciences, Bangalore, on Thursday. SPECIAL ARRANGEMENT

He expressed happiness that the number of female students in agriculture has been increasing. Female students have emerged as the top performers, with 35 students across Bachelor's, Master's and doctoral programmes collectively securing 97 gold medals and certificates.

Noting that the State government has implemented many schemes for the development of agriculture and allied sectors, Mr. Cheluvarayaswamy said that it was the responsibility of agricultural institutions, officials and agricultural scientists to establish direct contact with farmers, understand their problems and provide information about new technologies.

He also called upon the university students to use the knowledge and skills they have acquired to address the challenges in the sector and turn them into opportunities.

Honorary doctorate degrees were conferred upon G.V.K. Naidu, chairman and managing director of Sam Agri Fresh Private Limited; Srikantha H.K, agricultural entrepreneur, progressive farmer, and social worker; and Aravind T.M, a pioneer in the adoption of high-tech precision farming.

Hindu Pg 06

ಸಕ್ಕರೆ ರಫ್ತು ಸೆ. 30ರವರೆಗೆ ನಿಷೇಧ



■ ಬೆಲೆ ನಿಯಂತ್ರಣಕ್ಕೆ ಕೇಂದ್ರದ ಮಹತ್ವದ ಕ್ರಮ

ನವದೆಹಲಿ: ದೇಶೀಯ ಮಾರುಕಟ್ಟೆಯಲ್ಲಿ ಸಕ್ಕರೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬೆಲೆ ಏರಿಕೆಗೆ ಲಗಾಮು ಹಾಕಲು ಕೇಂದ್ರ ಸರ್ಕಾರ ಸಕ್ಕರೆ ರಫ್ತಿನ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ಸೆ. 30ರವರೆಗೆ ಸಂಪೂರ್ಣ ನಿಷೇಧ ಹೇರಿದೆ. ಈ ಮೊದಲು 'ನಿರ್ಬಂಧಿತ' (ರಿಸ್ಟ್ರಿಕ್ಟೆಡ್) ವರ್ಗದಲ್ಲಿದ್ದ ಸಕ್ಕರೆ ರಫ್ತು ನೀತಿಯನ್ನು ಈಗ 'ನಿಷೇಧಿತ' (ಪ್ರಾಹಿಬಿಟೆಡ್) ವರ್ಗಕ್ಕೆ ಸೇರಿಸಲಾಗಿದೆ ಎಂದು ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಅಧಿಸೂಚನೆ ಹೊರಡಿಸಿದೆ. ಆದರೆ, ಯುರೋಪಿಯನ್ ಯೂನಿಯನ್ ಮತ್ತು ಅಮೆರಿಕಕ್ಕೆ ವಿಶೇಷ ಕೋಟಾಗಳಡಿ ನಡೆಯುತ್ತಿರುವ ರಫ್ತಿಗೆ ಈ ನಿಯಮ ಅನ್ವಯವಾಗುವುದಿಲ್ಲ. ಅದಲ್ಲದೆ, ಈಗಾಗಲೇ ರಫ್ತು ಪ್ರಕ್ರಿಯೆಯಲ್ಲಿರುವ ಮತ್ತು ಸರ್ಕಾರದ ನಡುವಿನ ಒಪ್ಪಂದದಡಿ ನಡೆಯುವ ಸಾಗಣೆಗಳಿಗೆ ವಿನಾಯಿತಿ ನೀಡಲಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕದ ಉತ್ತಮ ಇಳುವರಿಯಿಂದಾಗಿ 2025-26ರ ಮಾರುಕಟ್ಟೆ ವರ್ಷದಲ್ಲಿ ದೇಶದ ಸಕ್ಕರೆ ಉತ್ಪಾದನೆ 29.3 ದಶಲಕ್ಷ ಟನ್‌ಗೆ ತಲುಪುವ ನಿರೀಕ್ಷೆ ಇದೆ. ಪಶ್ಚಿಮ ಪಷ್ಯಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಉಂಟಾಗಬಹುದಾದ ಹಣದುಬ್ಬರ ಮತ್ತು ಬೆಲೆ ಏರಿಕೆಯ ಆತಂಕವನ್ನು ಹೋಗಲಾಡಿಸಲು ಸರ್ಕಾರ ಈ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ವಿಶ್ವದ ಎರಡನೇ ಅತಿದೊಡ್ಡ ಸಕ್ಕರೆ ಉತ್ಪಾದಕ ರಾಷ್ಟ್ರವಾಗಿರುವ ಭಾರತ, 2022ರ ಅಕ್ಟೋಬರ್‌ನಿಂದಲೇ ಸಕ್ಕರೆ ರಫ್ತಿನ ಮೇಲೆ ಹಂತ ಹಂತವಾಗಿ ವಿವಿಧ ನಿರ್ಬಂಧಗಳನ್ನು ವಿಧಿಸುತ್ತ ಬಂದಿದೆ.

ಸರ್ಕಾರಕ್ಕೆ ಇಸ್ಮಾ ಮನವಿ: ಕೇಂದ್ರ ಸರ್ಕಾರ ಸಕ್ಕರೆ ರಫ್ತಿನ ಮೇಲೆ ಹೇರಿರುವ ಹಂತ ನಿಷೇಧದಿಂದ ಸಕ್ಕರೆ ಕಾರ್ಖಾನೆಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ಉತ್ಪಾದಕರ ಸಂಘ (ಐಎಸ್‌ಎಂಎ) ಮನವಿ ಮಾಡಿದೆ. ಈ ನಿರ್ಬಂಧದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಪೂರೈಕೆದಾರರ ವಿಶ್ವಾಸಾರ್ಹತೆಗೆ ಧಕ್ಕೆಯಾಗಲಿದೆ. ಈಗಾಗಲೇ ವಿದೇಶಿ ಖರೀದಿದಾರರೊಂದಿಗೆ ಮಾಡಿಕೊಂಡಿರುವ ರಫ್ತು ಒಪ್ಪಂದಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಬೇಕು. ಸುಮಾರು 60 ಸಾವಿರ ಟನ್ ಸಕ್ಕರೆ ರಫ್ತು ಪ್ರಕ್ರಿಯೆಯಲ್ಲಿದ್ದು, ಅದರ ಸಾಗಣೆಗೆ ಅವಕಾಶ ನೀಡಬೇಕು ಎಂದು ಸಂಸ್ಥೆಯ ಮಹಾನಿರ್ದೇಶಕ ದೀಪಕ್ ಬಲ್ಲಾನಿ ಕೋರಿದ್ದಾರೆ.

Vijayavani pg 02

ಭಾರತಿ ಏರ್‌ಟೆಲ್ ಉತ್ತರಾಧಿಕಾರ ಪರ್ವ

■ 10 ವರ್ಷಗಳಲ್ಲಿ ಮಕ್ಕಳಿಗೆ ಹಸ್ತಾಂತರ

ನವದೆಹಲಿ: ಟೆಲಿಕಾಂ ದಿಗ್ಗಜ ಸುನಿಲ್ ಭಾರ್ತಿ ಮಿತ್ತಲ್ ಅವರು ಮುಂದಿನ ಒಂದು ದಶಕದಲ್ಲಿ ಭಾರ್ತಿ ಏರ್‌ಟೆಲ್‌ನ ಚುಕ್ಕಾಣಿಯನ್ನು ತಮ್ಮ ಮಕ್ಕಳಿಗೆ ಹಸ್ತಾಂತರಿಸುವ ಯೋಜನೆಯನ್ನು ಬಹಿರಂಗಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಪ್ರವರ್ತಕ ಸಂಸ್ಥೆಯಾದ ಭಾರ್ತಿ ಟೆಲಿಕಾಂ ಕಂಪನಿಯಲ್ಲಿ ಶೇ. 51ಕ್ಕಿಂತ ಹೆಚ್ಚಿನ ಪಾಲನ್ನು ಮರಳಿ ಪಡೆಯಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಕಂಪನಿಯ ಅಧ್ಯಕ್ಷರಾಗಿ 2031ರವರೆಗೆ ಮರುನೇಮಕಗೊಂಡಿರುವ ಮಿತ್ತಲ್, ಮುಂದಿನ 3-4 ವರ್ಷಗಳಲ್ಲಿ ಹೆಚ್ಚುವರಿ ಷೇರುಗಳನ್ನು ಖರೀದಿಸಲು ಯೋಜಿಸಿದ್ದಾರೆ. ಇದಕ್ಕಾಗಿ ಸುಮಾರು ₹1 ಲಕ್ಷ ಕೋಟಿ ಹೂಡಿಕೆಯ ಅಗತ್ಯವಿದ್ದು, ಅಫ್ರಿಕಾದಲ್ಲಿಯೂ ಏರ್‌ಟೆಲ್ ಕಂಪನಿಯ ಪಾಲನ್ನು ಶೇ. 90ಕ್ಕೆ ಏರಿಸುವ ಗುರಿ ಹೊಂದಿದ್ದಾರೆ.

ನೈಸರ್ಗಿಕ ಕೃಷಿಗೆ ಉತ್ತೇಜನ ಅಗತ್ಯ: ರಾಜ್ಯಪಾಲ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ವಲಯ ಜಿಡಿಪಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ರಾಸಾಯನಿಕ ಮುಕ್ತ ಪೌಷ್ಟಿಕಾಂಶವುಳ್ಳ ಕೃಷಿ ಉತ್ಪನ್ನಗಳ ಉತ್ಪಾದನೆಗೆ ರೈತರು ಆದ್ಯತೆ ನೀಡಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ) ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಧುನಿಕ ಕೃಷಿ ಪದ್ಧತಿ ಜತೆಗೆ ಗುಣಮಟ್ಟದ ಉತ್ಪಾದನೆಗೆ ಒತ್ತು ನೀಡಬೇಕು. ರಾಸಾಯನಿಕಗಳ ಬಳಕೆ ಕಡಿಮೆಗೊಳಿಸಿ ಭೂಮಿಯ ಫಲವತ್ತತೆ ವೃದ್ಧಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಅತಿಯಾಗಿ ಬಳಸಿ ಮಣ್ಣು ನೀರು ಮತ್ತು ಪರಿಸರವನ್ನು ಕಲುಷಿತಗೊಳಿಸಲಾಗಿದೆ. ಇದರಿಂದ ಮಾನವನ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದರು.

ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವ ಅಗತ್ಯ ಹೆಚ್ಚಾಗಿದೆ. ಪ್ರಕೃತಿಯಲ್ಲಿ ಲಭ್ಯವಿರುವ ನೈಸರ್ಗಿಕ ಅಂಶಗಳನ್ನೇ ಕೀಟನಾಶಕ ಹಾಗೂ ಪೋಷಕಾಂಶಗಳಾಗಿ ಬಳಸುವ ಮೂಲಕ ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆ ಹೆಚ್ಚಿಸಬಹುದು. ಜೊತೆಗೆ ಸಾವಯವ ಗೊಬ್ಬರಗಳ ಬಳಕೆಯಿಂದ ಭೂಮಿಯ ಗುಣಮಟ್ಟ ಸುಧಾರಿಸಿ, ಉತ್ಪಾದನಾ ವೆಚ್ಚ ಕಡಿಮೆ ಆಗುವುದರೊಂದಿಗೆ ರೈತರ ಆದಾಯವೂ ಹೆಚ್ಚಾಗುತ್ತದೆ ಎಂದರು.

ವಿಕಸಿತ ಭಾರತ- 2047 ಸಂಕಲ್ಪ ಸಾಕಾರಗೊಳಿಸಬೇಕು. ಗುಣಮಟ್ಟದ ಉತ್ಪಾದನೆಯ ಜತೆಗೆ ಡ್ರೋನ್ ಬಳಕೆ, ಕೃತಕ ಬುದ್ಧಿಮತ್ತೆ, ಡಿಜಿಟಲ್ ಮಾರುಕಟ್ಟೆ ಮಾದರಿಗಳನ್ನು ವ್ಯಾಪಕವಾಗಿ ಬಳಸಬೇಕಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ರೈತರಿಗೆ ನೇರವಾಗಿ ಮಾರುಕಟ್ಟೆ ಸಂಪರ್ಕ ಒದಗಿಸುವ ಅಗತ್ಯವಿದೆ ಎಂದರು.

ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಮಾತನಾಡಿ, ಕೃಷಿ ವಿವಿಗಳ ವಿಜ್ಞಾನಿಗಳು ಸಂಶೋಧನೆಗೆ ಒತ್ತು ನೀಡಿ ಬೆಳೆಗಳಲ್ಲಿ ಹೆಚ್ಚಿನ ಸಂಖ್ಯೆಯ ನೂತನ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಿ ರೈತರ ಸಬಲೀಕರಣಕ್ಕೆ ಸಹಕರಿಸಬೇಕು ಎಂದರು.

ಕುಲಪತಿಗಳು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಸ್ಥಳೀಯ ಹಾಗೂ ವಿಶೇಷ ಬೆಳೆಯ ತಳಿಗಳನ್ನು ಗುರುತಿಸಿ ಆಯಾ ಭೌಗೋಳಿಕ ಪ್ರದೇಶಕ್ಕೆ ಜಿಐ ಟ್ಯಾಗ್ ಪಡೆಯಲು ವಿಜ್ಞಾನಿಗಳ ತಂಡ ರಚಿಸಿ ಕಾರ್ಯೋನ್ಮುಖರಾಗಬೇಕು. ಈ ಮೂಲಕ ರೈತರ ಆದಾಯ ಹೆಚ್ಚಿಸಿ ತಳಿ ಸಂರಕ್ಷಣಾ ಕ್ರಮ ಜರುಗಿಸುವಂತೆ ಸಲಹೆ ನೀಡಿದರು.

ಕುಲಪತಿ ಎಸ್.ವಿ. ಸುರೇಶ, ಕುಲಸಚಿವ ಡಾ.ಕೆ. ಮಧುಸೂಧನ್, ವಿಶ್ವವಿದ್ಯಾಲಯ ಸ್ಥಾಪನಾ ಮಂಡಳಿ ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು ಇದ್ದರು.



ಘಟಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಜಿ.ವಿ.ಕೆ.ನಾಯ್ಡು, ಎಚ್.ಕೆ. ಶ್ರೀಕಂಠ ಮತ್ತು ಟಿ.ಎಂ.ಆರವಿಂದ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಎನ್. ಚಲುವರಾಯಸ್ವಾಮಿ, ಥಾವರಚಂದ್ ಗೆಹಲೋತ್, ಎಲ್.ಎಸ್. ಶಶಿಧರ ಮತ್ತು ಎಸ್.ವಿ.ಸುರೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

55 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

2024-25ರಲ್ಲಿ ತೇರ್ಗಡೆಯಾದ ಒಟ್ಟು 1,115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು.

ಈ ಪೈಕಿ 747 ಮಂದಿ ಸ್ನಾತಕ, 260 ಸ್ನಾತಕೋತ್ತರ, 108 ಮಂದಿ ಪಿಎಚ್.ಡಿ ಪದವಿ ಪಡೆದರು. ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಜಿ.ವಿ.ಕೆ. ನಾಯ್ಡು, ಶ್ರೀಕಂಠ, ಅರವಿಂದ ಟಿ.ಎಂ. ಅವರಿಗೆ ಗೌರವ ಡಾಕ್ಟರೇಟ್ ಅನ್ನು ರಾಜ್ಯಪಾಲರು ಪ್ರದಾನ ಮಾಡಿದರು.

> ಕ್ವಾಂಟಮ್ ತಂತ್ರಜ್ಞಾನ, ಎ.ಐ, ಇತರ ತಂತ್ರಜ್ಞಾನಗಳ ಬಳಕೆ ಜತೆಗೆ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಮರುಶೋಧಿಸಿ ಭವಿಷ್ಯದ ಕೃಷಿಯನ್ನು ಇನ್ನಷ್ಟು ಸುಸ್ಥಿರಗೊಳಿಸಬೇಕಿದೆ
> **ಎಲ್.ಎಸ್. ಶಶಿಧರ,** ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ

ಟೆಂಪೊ ಚಾಲಕನ ಮಗನಿಗೆ 15 ಚಿನ್ನ

ಟೆಂಪೊ ಚಾಲಕರೊಬ್ಬರ ಮಗ 15 ಚಿನ್ನದ ಪದಕ ಪಡೆದು ಘಟಿಕೋತ್ಸವದಲ್ಲಿ ಗಮನ ಸೆಳೆದರು. ಬಿ.ಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ 91.02 ಅಂಕ ಪಡೆದ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಕೆ.ಈ. ಪ್ರೇಮ್ ಕುಮಾರ್ ಈ ಸಾಧನೆ ಮಾಡಿದವರು.

ತಂದೆ ಈಶ್ವರ ರಾವ್ ಟೆಂಪೊ ಚಾಲಕ ಆಗಿದ್ದರೆ, ತಾಯಿ ಗೃಹಿಣಿ. ಇಬ್ಬರೂ ಮಗನ ಸಾಧನೆಯನ್ನು ಕಣ್ತುಂಬಿಕೊಂಡರು. ಪ್ರಸ್ತುತ ದೆಹಲಿಯ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೀಡ್ಸ್ ಸೈನ್ಸ್ ಮತ್ತು ಟೆಕ್ನಾಲಜಿ ವಿಭಾಗದಲ್ಲಿ ಎಂಎಸ್ಸಿ ಓದುತ್ತಿದ್ದಾರೆ.

'ಸತತ ಪ್ರಯತ್ನ ಹಾಗೂ ಪಾಲಕರ, ಉಪನ್ಯಾಸಕರ ಸಹಕಾರದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಭವಿಷ್ಯದಲ್ಲಿ ರೈತ ಸಮುದಾಯಕ್ಕೆ ಸಹಾಯವಾಗುವ ಸಂಶೋಧನೆಗಳನ್ನು ನಡೆಸುವ ಗುರಿ ಇದೆ. ಅಪ್ಪ, ಅಮ್ಮ ನನ್ನ ಮೇಲಿಟ್ಟ ನಂಬಿಕೆ ಉಳಿಸಿದ್ದೇನೆ' ಎಂದು ಹರ್ಷ ವ್ಯಕ್ತಪಡಿಸಿದರು.

ಕೃಷಿ ಕಂಪನಿಗಳಲ್ಲಿ ಆಸಕ್ತಿ:

ವಿರಾಜಪೇಟೆ ತಾಲ್ಲೂಕಿನ ಕೃಷಿಕ ದಂಪತಿ ಪಿ.ವೈ.ಅಬ್ದುಲ್ ಮತ್ತು ಸರೀನಾ ಅವರ ಪುತ್ರಿ ಪಿ.ಆರ್. ಫಾತಿಮಾ ತಸ್ಲೀಮಾ ಅವರು ಬಿ.ಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆಯಲ್ಲಿ 11 ಚಿನ್ನದ ಪದಕ ಪಡೆದಿದ್ದಾರೆ.

'ಪ್ರೋಷಕರು ಮತ್ತು ಉಪನ್ಯಾಸಕರ ಸಹಕಾರವಿಲ್ಲದಿದ್ದರೆ ಈ ಸಾಧನೆ ಮಾಡಲು ಆಗುತ್ತಿರಲಿಲ್ಲ. ತಂದೆ ಕೃಷಿಕರಾದ ಕಾರಣ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಬಂತು. ಎಂಬಿಎ ಓದುತ್ತಿದ್ದೇನೆ. ಮುಂದೆ ಕೃಷಿ ಸಂಬಂಧಿತ ಕಂಪನಿಯಲ್ಲಿ ಕೆಲಸ ಮಾಡುವ ಆಸಕ್ತಿ ಇದೆ' ಎಂದು ಫಾತಿಮಾ ಹೇಳಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ ಆರ್.ಕೃಷ್ಣ ಪ್ರಿಯ, ಪಿ. ಆರ್. ಫಾತಿಮಾ ತಸ್ಲೀಮಾ, ಕೆ. ಈ. ಪ್ರೇಮ್ ಕುಮಾರ್, ಜೆ. ಜ್ಯೋತಿ ಮತ್ತು ಟಿ. ಕೆ. ಸ್ಫೂರ್ತಿ ಅವರು ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ

Prajavani pg 07

Kannadaprabha pg 04

ತಂತ್ರಜ್ಞಾನ ಆಧರಿತ ಕೃಷಿ ಪದ್ಧತಿ ಬೇಕು: ಗೌರ್ನರ್

ಬೆಂಗಳೂರು ಕೃಷಿ ವಿವಿ 60ನೇ ಘಟಿಕೋತ್ಸವ | 1115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ಪದವಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ಕ್ಷೇತ್ರದಲ್ಲಿ ರೈತ ಕೇಂದ್ರಿತ, ತಂತ್ರಜ್ಞಾನ ಆಧಾರಿತ, ಕೌಶಲ್ಯಭರಿತ ಕೃಷಿ ಪದ್ಧತಿಗಳನ್ನು ಅಳವಡಿಸಿ ಗುಣಮಟ್ಟದ ಉತ್ಪಾದನೆ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೃಷಿ ಪದವೀಧರರು ತಮ್ಮ ಜ್ಞಾನವನ್ನು ಕೃಷಿಕರ ಒಳಿತಿಗಾಗಿ ಬಳಸಬೇಕೆಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕರೆ ನೀಡಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಗುರುವಾರ ವಿವಿಯ 60ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದೇಶವು ಕೃಷಿ ಉತ್ಪನ್ನಗಳನ್ನು ಆಗತ್ಯಕ್ಕೆ ತಕ್ಕಷ್ಟು ಬೆಳೆಯುವುದರಲ್ಲಿ ಪ್ರಗತಿ ಸಾಧಿಸಿದೆ. ಭವಿಷ್ಯದಲ್ಲಿ ಗುಣಮಟ್ಟದ ಕೃಷಿ ಉತ್ಪಾದನೆಯ ಕುರಿತು ಯೋಚಿಸಬೇಕಾಗಿದೆ. ವಿಪರೀತ ರಾಸಾಯನಿಕ ಬಳಕೆಯನ್ನು ನಿಗ್ರಹಿಸಿ ಸಹಜ ಕೃಷಿ ಉಳಿಸಿ ಕೊಳ್ಳುವತ್ತ ಚಿಂತನೆ ನಡೆಯಬೇಕು ಎಂದು ಗೆಹಲೋತ್ ಸಲಹೆ ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ್ ಭಾರತ್- 2047 ಸಂಕಲ್ಪ ಸಾಕಾರ ಮಾಡುವಲ್ಲಿ ಕೃಷಿ ಕ್ಷೇತ್ರ ಮಹತ್ತರ ಪಾತ್ರ ವಹಿಸಲಿದೆ. ಗುಣಮಟ್ಟದ ಉತ್ಪಾದನೆಯ ಜತೆಗೆ ಕೃತಕ ಬುದ್ಧಿಮತ್ತೆ, ಡಿಜಿಟಲ್ ಮಾರುಕಟ್ಟೆ ಮಾದರಿಗಳನ್ನು ವ್ಯಾಪಕವಾಗಿ ಬಳಸಬೇಕಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ರೈತರಿಗೆ ನೇರ ಮಾರುಕಟ್ಟೆ ಸಂಪರ್ಕ ಒದಗಿಸುವ ಅಗತ್ಯವಿದೆ ಎಂದು ಹೇಳಿದರು.

ಹೆಚ್ಚಿನ ಜಿಐ ಟ್ಯಾಗ್‌ಗೆ ಸಲಹೆ: ಕೃಷಿ ಸಚಿವ ಹಾಗೂ ಸಹ ಕುಲಾಧಿಪತಿ ಎನ್. ಚಲುವರಾಯಸ್ವಾಮಿ ಮಾತನಾಡಿ, ಕೃಷಿ ವಿವಿಗಳ ವಿಜ್ಞಾನಿಗಳು ಸಂಶೋಧನೆಗೆ ಒತ್ತು ನೀಡಿ ಬೆಳೆಗಳಲ್ಲಿ ಹೆಚ್ಚಿನ ಸಂಖ್ಯೆಯ ನೂತನ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಿ ರೈತರ ಸಬಲೀಕರಣಕ್ಕೆ ಸಹಕರಿಸಬೇಕು. ಕುಲಪತಿಗಳು ವಿವಿ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಸ್ಥಳೀಯ ಹಾಗೂ ವಿಶೇಷ ಬೆಳೆಯ ತಳಿಗಳನ್ನು ಗುರುತಿಸಿ ಆಯಾ ಭೌಗೋಳಿಕ ಪ್ರದೇಶಕ್ಕೆ ಜಿಐ ಟ್ಯಾಗ್ ಪಡೆಯಲು ವಿಜ್ಞಾನಿಗಳ ತಂಡ ರಚಿಸಿ ಕಾರ್ಯೋನ್ಮುಖರಾಗಬೇಕು. ಈ ಮೂಲಕ ರೈತರ ಆದಾಯ ಹೆಚ್ಚಿಸಿ ತಳಿ ಸಂರಕ್ಷಣಾ ಕ್ರಮ ಜರುಗಿಸುವಂತೆ ಸಲಹೆ ನೀಡಿದರು.

ಘಟಿಕೋತ್ಸವ ಭಾಷಣ ಮಾಡಿದ ಬೆಂಗಳೂರಿನ ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ.ಎಲ್.ಎಸ್.ಶಶಿಧರ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ವಿನಾಶಕಾರಿ ನಾವೀನ್ಯತೆಗಳಿಗೆ ಹೊರತಾದ ಚಿಂತನೆಗಳನ್ನು ಆಳವಡಿಸುವ ಅಗತ್ಯವಿದೆ. ಫಿನೋಮಿಕ್ಸ್, ಜೀನ್ ಎಡಿಟಿಂಗ್, ಕ್ವಾಂಟಮ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಇತರ ತಂತ್ರಜ್ಞಾನಗಳ ಬಳಕೆ ಮಾಡುವ ಜತೆಗೆ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಮರುಶೋಧಿಸಿ ಭವಿಷ್ಯದ ಕೃಷಿಯನ್ನು ಇನ್ನಷ್ಟು ಸುಸ್ಥಿರಗೊಳಿಸಬೇಕಿದೆ ಎಂದು ಹೇಳಿದರು. ವಿವಿ ಕುಲಪತಿ ಡಾ.ಎಸ್.ವಿ. ಸುರೇಶ, ಕುಲಸಚಿವ ಡಾ.ಕೆ. ಮಧುಸೂದನ್, ವಿವಿ ಸ್ಥಾಪನಾ ಮಂಡಳಿ ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು ಇದ್ದರು.



ಬೆಂಗಳೂರು ಕೃಷಿ ವಿವಿಯ 60ನೇ ಘಟಿಕೋತ್ಸವದಲ್ಲಿ ಮೂವರಿಗೆ ಗೌರವ ಡಾಕ್ಟರೇಟ್ ನೀಡಲಾಯಿತು.



ಪದವಿ ವ್ಯಾಸಂಗದಲ್ಲಿ ಬಂಗಾರದ ಪದಕ ಗಳಿಸಿದ ಬೆಂಗಳೂರು ಕೃಷಿ ವಿವಿಯ ವಿದ್ಯಾರ್ಥಿಗಳ ಸಂಭ್ರಮ.

55 ವಿದ್ಯಾರ್ಥಿಗಳಿಗೆ 140 ಚಿನ್ನ, 3 ಡಾಕ್ಟರೇಟ್

ಘಟಿಕೋತ್ಸವದಲ್ಲಿ 2024-25ರಲ್ಲಿ ತೇರ್ಗಡೆಯಾದ ಒಟ್ಟು 1115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 747 ಮಂದಿ ಸ್ನಾತಕ, 260 ಸ್ನಾತಕೋತ್ತರ, 108 ಮಂದಿ ಪಿಎಚ್‌ಡಿ ಪದವಿ ಪಡೆದುಕೊಂಡರು. ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. ಈ ಸಂದರ್ಭ ಕೃಷಿ ಕ್ಷೇತ್ರದಲ್ಲಿ ಅಪರೂಪದ ಸಾಧನೆ ಮಾಡಿದ ಜಿ.ವಿ.ಕೆ. ನಾಯ್ಡು, ಶ್ರೀಕಂಠ, ಅರವಿಂದ ಟಿ.ಎಂ. ಅವರಿಗೆ ಗೌರವ ಡಾಕ್ಟರೇಟ್ ಅನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಟೆಂಪೋ ಡ್ರೈವರ್ ಮಗನಿಗೆ 15 ಚಿನ್ನ!

ಟೆಂಪೋ ಚಾಲಕರ ಮಗ ಬರೋಬ್ಬರಿ 15 ಚಿನ್ನದ ಪದಕ ಪಡೆದು ಘಟಿಕೋತ್ಸವದಲ್ಲಿ ಗಮನ ಸೆಳೆದರು. ಬಿಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ.91.02 ಅಂಕ ಪಡೆದ ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಪ್ರೇಮ್ ಕುಮಾರ್ ಈ ಸಾಧನೆ ಮಾಡಿದವರು. ತಂದೆ ಈಶ್ವರ ರಾವ್ ಟೆಂಪೋ ಡ್ರೈವರ್ ಆಗಿದ್ದು, ತಾಯಿ ಗೃಹಿಣಿ. ಪ್ರಸ್ತುತ ದೆಹಲಿಯ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಲ್ಲಿ ಸೀಡ್ ಸೈನ್ಸ್ ಮತ್ತು ಟೆಕ್ನಾಲಜಿ ವಿಭಾಗದಲ್ಲಿ ಎಂಎಸ್ಸಿ ಪದವಿ ಪಡೆಯುತ್ತಿರುವ ಪ್ರೇಮ್ ಕುಮಾರ್, ಭವಿಷ್ಯದಲ್ಲಿ ರೈತರಿಗೆ ಸಹಾಯವಾಗುವ ಸಂಶೋಧನೆಗಳನ್ನು ನಡೆಸುವ ಗುರಿ ಇಟ್ಟುಕೊಂಡಿದ್ದಾರೆ.

ನೈಸರ್ಗಿಕ ಕೃಷಿಗೆ ಒತ್ತು ನೀಡಿ: ಗೆಹಲೋತ್

ಭೂಮಿ ಫಲವತ್ತತೆ ವೃದ್ಧಿಸಿ | ಕೃಷಿ ವಿವಿ ಘಟಿಕೋತ್ಸವದಲ್ಲಿ ರಾಜ್ಯಪಾಲರ ಸಲಹೆ



ನಾಯ್ಡು, ಶ್ರೀಕಂಠ, ಅರವಿಂದ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ.

■ ಉದಯವಾಣಿ ಸಮಾಚಾರ

ಬೆಂಗಳೂರು: ರೈತರು ರಾಸಾಯನಿಕ ಮುಕ್ತ ಪೌಷ್ಟಿಕಾಂಶವುಳ್ಳ ಆಹಾರ ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ 2047ರ ಪೂರಕಿತ ಭಾರತ ಸಂಕಲ್ಪ ಸಾಕಾರಗೊಳಿಸಬೇಕು ಎಂದು ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು.

ಜೆಕೆವಿಕೆ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈತರು ಆಧುನಿಕ ಕೃಷಿ ಪದ್ಧತಿಗಳೊಂದಿಗೆ ಗುಣಮಟ್ಟದ ಪೌಷ್ಟಿಕಾಂಶವುಳ್ಳ ಉತ್ಪಾದನೆಗೆ ವಿಶೇಷ ಒತ್ತು ನೀಡಬೇಕು. ರಾಸಾಯನಿಕ ಬಳಕೆಯನ್ನು ಕಡಿಮೆಗೊಳಿಸಿ ಭೂಮಿಯ ಫಲವತ್ತತೆ ವೃದ್ಧಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಆಧಾರಿತ, ಕೌಶಲಭರಿತ ನೈಸರ್ಗಿಕವಾದ ಕೃಷಿ ಪದ್ಧತಿಗಳನ್ನು ಅಳವಡಿಸುವ ಮೂಲಕ ಪೌಷ್ಟಿಕಾಂಶವುಳ್ಳ ಗುಣಮಟ್ಟದ ಆಹಾರ ಉತ್ಪಾದನೆ ಮಾಡುವ ಅಗತ್ಯವಿದೆ ಎಂದರು.

ಕೃಷಿಸಚಿವಎನ್.ಚಲುವರಾಯಸ್ವಾಮಿ ಮಾತನಾಡಿ, ಪದವಿ ಗಳಿಸಿದ ವಿದ್ಯಾರ್ಥಿಗಳು ತಾವು ಪಡೆದ ಜ್ಞಾನ ಮತ್ತು ಕೌಶಲ್ಯದ ಮೂಲಕ ಕೃಷಿ ಕ್ಷೇತ್ರದ ಸವಾಲುಗಳನ್ನು ಪರಿಹರಿಸಬೇಕು ಎಂದು ಸಲಹೆ ನೀಡಿದರು.

ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಎಲ್.ಎಸ್. ಶಶಿಧರ ಮಾತನಾಡಿ, ಜೆನೋಮಿಕ್ಸ್, ಜೀನ್ ಎಡಿಟಿಂಗ್, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನದಂತಹ ಆಧುನಿಕತೆಯನ್ನು ಕೃಷಿ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ಮಾತನಾಡಿ, ಕೃಷಿ ವಿವಿ ಕೈಗೊಂಡಿರುವ ಸಂಶೋಧನೆ, ನೂತನ ತಳಿಗಳು, ವಿದ್ಯಾರ್ಥಿಗಳಿಗೆ ಬೋಧನಾ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ವಿವಿಗೆ ಸಂದ ಗೌರವ ಪುರಸ್ಕಾರಗಳ ಕುರಿತು ವರದಿಯನ್ನು ಪ್ರಸ್ತುತ ಪಡಿಸಿದರು. ಘಟಿಕೋತ್ಸವದಲ್ಲಿ ಕುಲಸಚಿವ ಡಾ.ಕೆ. ಮಧುಸೂಧನ್, ವಿಶ್ವವಿದ್ಯಾಲಯ ಸ್ಥಾಪನಾ ಮಂಡಳಿ ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

1115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು

ಬೆಂಗಳೂರು: ವಿವಿಧ ಕೋರ್ಸ್‌ಗಳನ್ನು ಪೂರೈಸಿದ 1115 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಲಾಯಿತು. 2024-25ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ 747 ಸ್ನಾತಕ ವಿದ್ಯಾರ್ಥಿಗಳು, 260 ಸ್ನಾತಕೋತ್ತರ ಹಾಗೂ 108 ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1115 ವಿದ್ಯಾರ್ಥಿಗಳು ಪದವಿ ಪಡೆದುಕೊಂಡರು. ಇದೇ ವೇಳೆ ಅತ್ಯುತ್ತಮ ಶ್ರೇಣಿ ಪಡೆದ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಚಿನ್ನದ ಪದಕ ಸಾಧನೆಯಲ್ಲಿ ವಿದ್ಯಾರ್ಥಿನಿಯರು ಮೇಲುಗೈ ಸಾಧಿಸಿದರು. ಸ್ನಾತಕ, ಸ್ನಾತಕೋತ್ತರ, ಪಿಎಚ್‌ಡಿ ಸೇರಿದಂತೆ ಒಟ್ಟು 35 ವಿದ್ಯಾರ್ಥಿನಿಯರು ಚಿನ್ನದ ಪದಕ ಪಡೆದರು. ಸ್ನಾತಕ ಪದವಿ ವಿಭಾಗದಲ್ಲಿ 9 ವಿದ್ಯಾರ್ಥಿನಿಯರು, ಸ್ನಾತಕೋತ್ತರ ಪದವಿಯಲ್ಲಿ24 ವಿದ್ಯಾರ್ಥಿನಿಯರು, ಹಾಗೂ ಪಿಎಚ್‌ಡಿ ವಿಭಾಗದಲ್ಲಿ ಇಬ್ಬರು ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ ಲಭಿಸಿತು.

ಮೂವರು ಕೃಷಿ ಸಾಧಕರಿಗೆ ಗೌರವ ಡಾಕ್ಟರೇಟ್: ಕೃಷಿ ಸಂಬಂಧಿತ ವಲಯದಲ್ಲಿ ಸಾಧನೆಗೈದ ಕೋಲಾರ ಜಿಲ್ಲೆಯ ಜಿ.ವಿ.ಕೆ.ನಾಯ್ಡು, ಕನಕಪುರದ ಪ್ರಗತಿಪರ ರೈತ, ಶ್ರೀಕಂಠ ಎಚ್.ಕೆ. ಮತ್ತು ದೊಡ್ಡಬಳ್ಳಾಪುರದ ಕೃಷಿಕ ಟಿ.ಎಂ.ಅರವಿಂದ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಲಾಯಿತು.

ಪ್ರೇಮ್‌ಕುಮಾರ್‌ಗೆ 15 ಚಿನ್ನ: ಚಾಲಕನ ಪುತ್ರ ಗ್ರಾಮೀಣ ವಿದ್ಯಾರ್ಥಿ ಪ್ರೇಮ್‌ಕುಮಾರ್ ಕೆ.ಇ. ಸ್ನಾತಕ ಪದವಿ ವಿಭಾಗದ ಬಿಎಸ್ಸಿ(ಆನರ್ಸ್) ಕೃಷಿ ಕೋರ್ಸ್‌ನ ಅತ್ಯುತ್ತಮ ಫಲಿತಾಂಶ ಸಾಧನೆಗೆ ಒಟ್ಟು 15 ಚಿನ್ನದ ಪದಕಗಳು ಲಭಿಸಿದೆ. ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದವರು.

ಫಾತಿಮಾಗೆ 11 ಪದಕ: ವಿರಾಜಪೇಟೆ ತಾಲೂಕಿನ ಕೃಷಿಕ ದಂಪತಿ ಪಿ.ವೈ.ಅಬ್ದುಲ್ ಮತ್ತು ಸರೀನಾ ಅವರ ಪುತ್ರಿ ಪಿ.ಆರ್.ಫಾತಿಮಾ ತಸ್ಲೀಮ ಬಿ.ಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆಯಲ್ಲಿ 11 ಚಿನ್ನದ ಪದಕ ಪಡೆದುಕೊಂಡಿದ್ದಾರೆ.

Udayavani pg 06

ಬಿಸಿಲಿನಿಂದ ರಕ್ಷಣೆ | ನೀರಿನ ಬಳಕೆ ಪ್ರಮಾಣ ತಗ್ಗಲಿದೆ | ಭೂಮಿ ಫಲವತ್ತತೆಗೂ ಅನುಕೂಲ

ಸುಡುವ ಅಡಕೆ ತೋಟಕ್ಕೆ ತಂಪು ತಡೆಗಾಳಿ

■ **ಯಳನಾಡು ಮಂಜು** ದಾವಣಗೆರೆ
manjunath.lokanath@timesofindia.com

ಅಡಕೆ ನಾಡಾಗಿ ಬೆಳೆಯುತ್ತಿರುವ ದಾವಣಗೆರೆಯಲ್ಲಿ ಬರು ಬೇಸಿಗೆಯ ಈ ದಿನಗಳಲ್ಲಿ ಅಡಕೆ ತೋಟಗಳು ನಲುಗುತ್ತಿವೆ. ಜಿಲ್ಲೆಯ ಅನೇಕ ಕಡೆ ಅದರಲ್ಲೂ ಬಯಲುಸೀಮೆ ಜಗಳೂರು ಮತ್ತು ಚನ್ನಗಿರಿ ಭಾಗದಲ್ಲಿ ಬಿಸಿಲ ತಾಪಕ್ಕೆ ತೇವಾಂಶ ಬೇಗ ಆರುತ್ತಿರುವುದರಿಂದ, ಅಡಕೆಗೆ ಹಾನಿ ಆಗುತ್ತಿರುವ ಬಗ್ಗೆ ವರದಿಯಾಗುತ್ತಿದೆ.

ಬಿಸಿಲ ಬೇಗೆಯಿಂದ ದಿನೇದಿನೆ ಪರಿಸ್ಥಿತಿ ಬಿಗಡಾಯಿಸುತ್ತಿದ್ದು, ಅಡಕೆ ತೋಟಗಳಿಗೆ ಹಾನಿ ಆಗುತ್ತಿರುವುದರಿಂದ ಬಹಳಷ್ಟು ರೈತರು ತಲೆ ಮೇಲೆ ಕೈ ಹೊತ್ತಿದ್ದಾರೆ. ಆದರೆ, ಇಂತಹ ವಿಷಮ ಪರಿಸ್ಥಿತಿಯಲ್ಲೂ ಅನೇಕ ಅಡಕೆ ತೋಟಗಳು ಹೆಚ್ಚಿನ ಹಾನಿ ಆಗದೆ ಹಸಿರು ಕಾಯ್ದುಕೊಂಡಿರುವುದು 'ತಡೆಗಾಳಿ' ನಿರ್ಮಾಣದಿಂದ ಎಂದು ವರದಿಯೊಂದು ಹೇಳುತ್ತಿದೆ. ಹಾಗಾಗಿ, ರೈತರು ತಮ್ಮ ಅಡಕೆ ತೋಟಗಳಿಗೆ ತಡೆಗಾಳಿ ನಿರ್ಮಿಸಬೇಕೆಂದು ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

ಏನಿದು ತಡೆಗಾಳಿ ?

ಅಡಕೆ ತೋಟದ ಸುತ್ತಲೂ ಗಿಡ, ಮರಗಳನ್ನು ಬೆಳೆಸಿ 'ತಡೆಗಾಳಿ' ಮಾಡಬಹುದು. ಅದರಲ್ಲೂ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಆರಣ್ಯ ಮತ್ತು ಹಣ್ಣಿನ ಗಿಡಗಳನ್ನು ಬೆಳೆಸಿದರೆ ಹೊರಗಿನ ತಾಪಮಾನಕ್ಕಿಂತ 4 ರಿಂದ 5 ಡಿಗ್ರಿ ಅಡಕೆ ತೋಟದಲ್ಲಿ ಉಷ್ಣಾಂಶ ಕಡಿಮೆ ಆಗಲಿದೆ. ಇದರಿಂದ ನೀರಿನ ಬಳಕೆ ಪ್ರಮಾಣ ಕಡಿಮೆ ಇರಲಿದೆ ಮತ್ತು ಭೂಮಿಯಲ್ಲಿ ತೇವಾಂಶ ಬೇಗ ಆರುವುದಿಲ್ಲ. ಪ್ರಮುಖವಾಗಿ ಅಡಕೆ ತೋಟಗಳಿಗೆ ಆಗುವ ಹಾನಿಯನ್ನು ತಪ್ಪಿಸಲಿದೆ.

ಅದರಲ್ಲೂ ಬರು ಬೇಸಿಗೆಯ ದಿನಗಳಲ್ಲಿ ಈಗ ಅನೇಕ ಕಡೆ ಅಡಕೆ ತೋಟಗಳು ಹಾನಿ ಆಗುತ್ತಿರುವುದು, ಕಾಂಡ ಸುಟ್ಟು ಹೋಗುವುದು, ಎಷ್ಟೇ ನೀರು ಕೊಟ್ಟರೂ ತೇವಾಂಶ ನಿಲ್ಲದಿರುವುದು, ಬಿಸಿಲಿನ ಬೇಗೆಗೆ ಅರಳು ಉದುರುತ್ತಿರುವುದು ಇಂತಹ ಅನೇಕ ಸಮಸ್ಯೆಗಳು ಕಂಡು ಬರುತ್ತಿವೆ. ಈ ಬಾರಿ ಬೇಸಿಗೆಯಲ್ಲಿ ಅಂತರ್ಜಲ ಕಡಿಮೆ ಆಗುವುದರ ಜತೆಗೆ ಬಿಸಿಲಿನ ತಾಪದಿಂದಾಗಿ ಅಡಕೆ ತೋಟಗಳಿಗೆ ಹಾನಿ ಪ್ರಮಾಣ ಹೆಚ್ಚಿದೆ. ಬೇಸಿಗೆಯಲ್ಲಿ ವಾಡಿಕೆ ಮಳೆ ಸುರಿಯದೆ ಇರುವುದರಿಂದ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಗಿದೆ.

ಚನ್ನಗಿರಿ ತಾಲೂಕಿನ ಉಬ್ರಾಣಿ ಹೋಬಳಿ ಮತ್ತು ಕೆರೆಗಳ ತುಂಬಿಸುವ ಯೋಜನೆ ನಂತರ ಈಗತಾನೇ ಅಡಕೆ ಬೆಳೆಯತ್ತ ಚಿತ್ತ ಹರಿಸಿರುವ ಜಗಳೂರು ತಾಲೂಕಲ್ಲಿ ಹಾನಿ ಪ್ರಮಾಣ ಹೆಚ್ಚಿದೆ.



ಹರಿಹರ ತಾಲೂಕು ರೈತ ರಾಮಾಂಜನೇಯ ತೋಟದಲ್ಲಿ ನಿರ್ಮಿಸಿರುವ ಬಿಸಿ ಗಾಳಿ ತಡೆ.

ಏನೇನೂ ಗಿಡ ಬೆಳೆಯಬಹುದು

ತೆಂಗು, ಸಿಲ್ವರ್, ಮಹಾಗನಿ, ಹೆಬ್ಬೇವು, ಚೊಗಚೆ ಗಿಡ ಸೇರಿ ಬಿಸಿಗಾಳಿ ತಡೆ ನೀಡುವ ಆರಣ್ಯ ಗಿಡಗಳ ಬೆಳೆದರೆ, ನಾಲ್ಕೂವರೆ ಅಡಿಗೆ ಒಂದು ಅಡಕೆ ಗಿಡ ಬೆಳೆಯಬಹುದು.

ಏನು ಉಪಯೋಗ ?

- ಅಡಕೆ ಕಾಂಡ ಸುಡುವುದಕ್ಕೆ ತಡೆ
- ಬೇಸಿಗೆ ಬಿಸಿ ಗಾಳಿಗೆ ತಡೆ, ನೀರಿನ ಬಳಕೆ ಪ್ರಮಾಣ ತಗ್ಗಲಿದೆ
- ತೇವಾಂಶ ಬೇಗ ಆರುವುದಿಲ್ಲ
- ತೋಟಗಳಿಗೆ ಹೆಚ್ಚಿನ ಹಾನಿ ಆಗುವುದಿಲ್ಲ
- ಹೊರಗಿನ ಉಷ್ಣಾಂಶಕ್ಕಿಂತ ನಾಲ್ಕೈದು ಡಿಗ್ರಿ ಕಡಿಮೆ ಇರಲಿದೆ

ಬಿಸಿ ಗಾಳಿ ತಡೆ ಮಾಡಲು ಅಳಿಲು ಕಾಟ ಎಂದು ರೈತರು ಹಿಂದೇಟು ಹಾಕುತ್ತಾರೆ. ಆದರೆ ಬಿಸಿ ಗಾಳಿ ತಡೆ ಮಾಡುವಾಗ ಗಿಡಗಳ ಮಧ್ಯೆ ಒಂದಷ್ಟು ಹಣ್ಣಿನ ಗಿಡ ಬೆಳೆಸಿದರೆ ಅಳಿಲುಗಳು ಅಡಕೆಗೆ ತೊಂದರೆ ಕೊಡುವುದಿಲ್ಲ.

-ರಾಘವೇಂದ್ರ ಪ್ರಸಾದ್
ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ

ತೇಗ ಕಡಿಮೆ ಮಾಡಿ

ಬಿಸಿ ಗಾಳಿ ತಡೆ ಮಾಡುವಾಗ ತೇಗದ ಗಿಡ ಬೆಳೆಸುವುದ ಕಡಿಮೆ ಮಾಡಿ. ಈ ಮರದ ಬೇರಿನಿಂದ ಆಂಟಿಗೊನೆಟ್ರಿಕ್ ಪ್ರಾಪರ್ಟಿ ಎಂಬ ವಸ್ತು ಬಿಡುಗಡೆ ಆಗಲಿದೆ. ಇದು ಕಳೆ ನಾಶಕದ ರೀತಿ ಕೆಲಸ ಮಾಡುವುದರಿಂದ ಹತ್ತು ಅಡಿ ಸುತ್ತ ಯಾವುದೇ ಬೆಳೆ ಬೆಳೆಯುವುದಿಲ್ಲ.

-ಬಸವನಗೌಡ ಕೃಷಿ ವಿಜ್ಞಾನಿ, ಕೆವಿಕೆ

ಹಾಗಾಗಿ ರೈತರು ಈ ಕೂಡಲೇ ಬಿಸಿ ಗಾಳಿ ತಡೆ ನಿರ್ಮಿಸಿಕೊಳ್ಳುವುದು ಮತ್ತು ಒಣ, ಹಸಿರು ಹೊದಿಕೆ ಮಾಡುವುದರಿಂದ ಬೇಸಿಗೆಯಲ್ಲಿ ಅಡಕೆ ತೋಟಗಳಿಗೆ ಹೆಚ್ಚಿನ ಹಾನಿ ಆಗದಂತೆ ರಕ್ಷಿಸಿಕೊಳ್ಳಬಹುದು ಎಂದು ತೋಟಗಾರಿಕೆ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

V-karnataka pg 08